ಹೆಸರಿನಲ್ಲೇನಿದೆ ?



✍️ಶ್ರೀವಲ್ಲಿ ರೈ ಮಾರ್ಟೆಲ್

ಒಂದು ಗುರುಕುಲದಲ್ಲಿ ಬೇರೆ ಬೇರೆ ಹೆಸರುಗಳ ಅನೇಕ ಶಿಷ್ಯರು ವಿದ್ಯಾರ್ಜನೆ ಮಾಡುತ್ತಿದ್ದರು.
ಅವರಲ್ಲಿ ಒಬ್ಬ ಶಿಷ್ಯನ ಹೆಸರು 'ಚುವಪ್ಪ' ಎಂದಿತ್ತು. "ನಾನು ಯಾವುದಕ್ಕೂ ಪ್ರಯೋಜನವಿಲ್ಲದವನಾಗಿರಬೇಕು, ಅದಕ್ಕೇ ನನ್ನ ಹೆಸರು 'ಚುವಪ್ಪ' ಎಂದಿದೆ" ಎಂಬ ದುಃಖದಿಂದ ಅಳುತ್ತಾ ಹೋಗಿ ಗುರುವಿನಲ್ಲಿ ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ಚುವಪ್ಪನ ಮಾನಸಿಕ ವೇದನೆಯನ್ನು ಅರ್ಥಮಾಡಿಕೊಂಡ ಗುರುಗಳು, "ನಿನ್ನ ಹೆಸರು ಚುವಪ್ಪ ಎಂದು ದುಃಖಪಡಬೇಡ, ಅದು 'ಶಿವ'ನ ಹೆಸರು. ಬೇಕಿದ್ದರೆ ನಿನ್ನ ಹೆಸರನ್ನು ಬದಲಾಯಿಸೋಣ. ನೀನು ನಗರ ಪರ್ಯಟನೆಗೆ ಹೋಗು. ದಾರಿಯಲ್ಲಿ ಸಿಕ್ಕವರ ಹೆಸರುಗಳನ್ನು ಕೇಳು. ಯಾರ ಹೆಸರು ನಿನಗೆ ಒಳ್ಳೆಯದು ಎನಿಸುತ್ತದೋ ಆ ಹೆಸರನ್ನು ನೆನಪಿನಲ್ಲಿಟ್ಟುಕೊಂಡು ಬಾ, ಅದನ್ನೇ ನಿನಗೆ ಇಡೋಣ" ಎಂದು ಹೇಳುತ್ತಾರೆ.
ಗುರುಗಳ ಮಾತನ್ನು ಕೇಳಿ ಸಂತೋಷದಿಂದಲೇ ಚುವಪ್ಪ ನಗರ ಸಂಚಾರಕ್ಕೆ ಹೊರಡುತ್ತಾನೆ. ಒಂದು ಕಡೆಯಲ್ಲಿ ಕೆಲವರು ಶವವನ್ನ ಹೊತ್ತುಕೊಂಡು ಹೋಗುತ್ತಿದ್ದರು. ಚುವಪ್ಪ ಶವ ಹೊತ್ತಿದ್ದ ಒಬ್ಬನಲ್ಲಿ, "ತೀರಿಕೊಂಡವರ ಹೆಸರೇನು?" ಎಂದು ಕೇಳುತ್ತಾನೆ. "ಚಿರಂಜೀವಿ" ಎಂಬ ಉತ್ತರ ಸಿಗುತ್ತದೆ! "ಚಿರಂಜೀವಿಗೂ ಸಾವು ಇದೆಯಾ!?" ಎಂದು ಆಶ್ಚರ್ಯಪಡುತ್ತಾ ಚುವಪ್ಪ ಮುಂದೆ ಹೋಗುವಾಗ, ಕೋಲು ಹಿಡಿದುಕೊಂಡು, ಕೆಮ್ಮುತ್ತಾ, ಅಳುತ್ತಾ ಔಷಧಿಗೆ ಹೋಗುತ್ತಿರುವ ಒಬ್ಬ ವ್ಯಕ್ತಿ ಸಿಗುತ್ತಾನೆ.

"ಅಣ್ಣಾ, ನಿಮ್ಮ ಹೆಸರೇನು?" ಎಂದು ಚುವಪ್ಪ ಕೇಳಿದ್ದಕ್ಕೆ, "ನನ್ನ ಹೆಸರು ಸಂತೋಷ್" ಎಂದು ಆ ವ್ಯಕ್ತಿ ಹೇಳುತ್ತಾನೆ. "ಸಂತೋಷನಿಗೂ ಇಷ್ಟೊಂದು ದೊಡ್ಡ ದುಃಖವೇ?!" ಎಂದು ಅವನಿಗೆ ಭಾರೀ ಆಶ್ಚರ್ಯವಾಗುತ್ತದೆ.
ಸ್ವಲ್ಪ ಮುಂದೆ ಹೋದಾಗ ಒಬ್ಬ ಅಜ್ಜಿ ಭಿಕ್ಷೆ ಬೇಡುತ್ತಿದ್ದಳು. "ಅಮ್ಮಾ, ನಿಮ್ಮ ಹೆಸರೇನು?" ಎಂದು ಚುವಪ್ಪ ಕೇಳುತ್ತಾನೆ. "ನನ್ನ ಹೆಸರು ಭಾಗ್ಯಲಕ್ಷ್ಮಿ ಮಗಾ" ಎಂದು ಭಿಕ್ಷೆ ಬೇಡುವ ಅಜ್ಜಿ ಹೇಳಿದಾಗ, "ನೀವು ಭಾಗ್ಯಲಕ್ಷ್ಮಿಯಾಗಿದ್ದರೂ ದರಿದ್ರ ಲಕ್ಷ್ಮಿಯಂತೆ ಭಿಕ್ಷೆ ಬೇಡುತ್ತಿದ್ದೀರಲ್ಲಾ?" ಎಂದು ಕೇಳುತ್ತಾನೆ.
ಆಗ ಆ ಭಿಕ್ಷುಕ ಅಜ್ಜಿ ಮುಖದಲ್ಲಿ ಮಂದಹಾಸ ಬೀರುತ್ತಾ, "ನೋಡು ಮಗಾ, ಮನುಷ್ಯ ತನ್ನ ಹೆಸರಿಗೆ ತಕ್ಕಂತೆ ಇರಬೇಕೆಂದೇನೂ ಇಲ್ಲ. ಹೆಸರು ಕರೆಯುವುದಕ್ಕೋಸ್ಕರ ಇಡುವುದು. ಮನುಷ್ಯನ ಮಹತ್ವ ತಿಳಿಯುವುದು ಅವರ ಆಚಾರ, ವಿಚಾರ, ಗುಣ ನಡತೆಯಿಂದ" ಎಂದು ಹೇಳಿದ ಆ ಮಾತು ಚುವಪ್ಪನ ಮನಸ್ಸನ್ನು ಪರಿವರ್ತನೆ ಮಾಡುತ್ತದೆ.
ಅಲ್ಲಿಂದಲೇ ವಾಪಸ್ ಗುರುಮಠಕ್ಕೆ ಬಂದು ಗುರುವಿನಲ್ಲಿ, "ನನ್ನ ಹೆಸರು 'ಚುವಪ್ಪ' ಎಂದೇ ಇರಲಿ. ನನಗೆ ಅದರ ಅರ್ಥ ತಿಳಿಯಿತು, ಹೆಸರನ್ನು ಬದಲಾಯಿಸುವುದು ಬೇಡ" ಎಂದು ತಾನೂ ಸಂತೋಷದಿಂದ ನಕ್ಕು, ಗುರುಗಳನ್ನೂ ನಗಿಸಿ ಮತ್ತೆ ಅಧ್ಯಯನಕ್ಕೆ ಕುಳಿತುಕೊಳ್ಳುತ್ತಾನೆ.